ದೊಡ್ಡ ತಮ್ಮಯ್ಯನವರ ಗಾಡಿ ನಡೆಯುತ್ತಿತ್ತು. ಗಾಡಿ ಹೊಡೆಯುತ್ತಿದ್ದವನು ಪಾಲನೇ. ಅವತ್ತು ಗಾಡಿ ಹೊಡೆಯುವ, ಉಳುವೆ ಮಾಡುವ ಆಳು ಹೊಟ್ಟೆಬೇನೆಯೆಂದು ಕೇರಿಗೆ ಹೋಗಿಬಿಟ್ಟಿದ್ದನಾದ್ದರಿಂದ ತಮ್ಮಯ್ಯನವರು ಪಾಲಯ್ಯನನ್ನೇ ಪರ್ಸಗೆ ಕರೆದು ಗಾಡಿ ಹೊಡೆಯುವಂತೆ ಹೇಳಿದ್ದರು.

ಕಾರಯ್ಯನ ಗುಡ್ಡದ ಬುಡದಲ್ಲಿ ಜಾತ್ರೆಯೇನೋ ಆಯಿತು. ಅದೆಲ್ಲ ಆಗಿ ಕರಡಿ ಕಣಿವೆ ಗ್ರಾಮಸ್ಥರೆಲ್ಲ ಹೋದವರು ಹೋದಂತೆ ಬಂದರೆ, ಪಾಲಯ್ಯನು ಪಾಲಯ್ಯನಾಗಿ ಬರಲಿಲ್ಲ. ಗಂಡ ಬರುವನೆಂದು ಆವತ್ತು ಬೆಳಗೆದ್ದು ಒಲೆ ಉರಿಸಿ ಹಿಟ್ಟಿನೆಸರು ಮಡಗಿ, ಮಾದೇವಿ ಕುದಿ ಬರುತ್ತಿದ್ದ ಮಡಕೆಯ ಕಡೆಗೊಮ್ಮೆ, ಗಂಡ ಬಂದನೇ ಎಂದು ಬಾಗಿಲ ಕಡೆಗೊಮ್ಮೆ ನೋಡುತ್ತಿದ್ದಳು. ಅದೇ ತಮ್ಮಯ್ಯನವರ ಗಾಡಿಯಲ್ಲಿ ಚಿರತೆ ಬಯಲಿನ ಅವನ ಗೆಣೆಕಾರನಾಗಿದ್ದ ಗಿರಿಯನು, ಪಾಲಯ್ಯನ ಹೆಣ ಇಳಿಸಿದ. ಉರಿಯುತ್ತಿದ್ದ ಒಲೆ ಭಗ್ಗನೆ ಹತ್ತಿ ಹಟ್ಟಿಯೆಲ್ಲ ಉರಿದು ಅದರೊಳಗೆ ಗಂಡನೂ ತಾನೂ ಬೂದಿಯಾದಂತೆ ಭಾಸವಾಯಿತು ಮಾದೇವಿಗೆ. ಊರ ಜನ ಪಾಲನು ಹೇಗೆ ಸತ್ತ ಎಂತು ಸತ್ತ ಎನ್ನುತ್ತಿದ್ದಂತೆಯೇ ಕರಡಿ ಕಣಿವೆ ಕೆರೆ ಏರಿಯ ಮುಂದಣ ಬಯಲಲ್ಲಿ ಸಮಾಧಿಯಾಗಿ ಹೋದ.

ಗಂಡ ತೀರಿಕೊಂಡ ಮೇಲೆ ಮಾದೇವಿ ಅಪ್ಪ ಅವ್ವ ಸೋದರ ಸಂಬಂಧ ಅನ್ನದೆ ಗಂಡನೊಂದಿಗೆ ತಿಂಗಳುಗಳಷ್ಟೇ ಬದುಕಿದ ಗುಡಿಸಲಲ್ಲಿ ಉಳಿದಳು. ಅಲ್ಲೇ ಬದುಕಿ ಪಾಲಯ್ಯನ ಹೆಸರಲ್ಲಿ ದೀವಿಗೆ ಉರಿಸುವುದಾಗಿ ಹೇಳಿ, ಬೀದಿ ಹೆಂಗಸರೊಂದಿಗೆ ಕೂಲಿನಾಲಿಗೆ ಹೋಗಲು ನಿಂತಳು. ಆಗಂತೂ ಊರ ತೋಟ ತುಡಿಕೆಯವರೆಲ್ಲ ಮಾದೇವಿಯೇ ಬೇಕು ಎನ್ನುವಂತಾದರು. ಬೈಗಿನೊಳಗೆ ಹೊಲಗದ್ದೆಯ ಯಜಮಾನರು ಮಾದೇವಿಯ ಕೈಗೆ ಎರಡು ರೂಪಾಯಿ ಕೂಲಿ ಹಾಕುವುದರ ಬದಲು ಮರೆತೋ ಎಂಬಂತೆ ಐದು ರೂಪಾಯಿ ಹಾಕಿಬಿಡುವರು. ಮಾದೇವಿ ಮಾತ್ರ 'ಸಾವ್ಕಾರ್ರೆ ತಗಳಿ' ಅಂದು ಹಣ ವಾಪಸು ಮಾಡುವಲ್ಲಿ ಹಿರೀಕರ ಮುಖದಲ್ಲಿ ನಿರಾಶೆಯ ಅಲೆ ಹಾಯುತ್ತಿತ್ತು.

★★★

ಇಂಥ ಮಾದೇವಿ ಚಿರತೆ ಬಯಲಿನ ಯಾವನೋ ಗಿರಿಯನನ್ನು ಕಂಡದ್ದು ಕೂಡಿದ್ದು ಹೇಗೆ? ಹೊತ್ತು ಗೊತ್ತೆನ್ನದೆ ಯಾವತ್ತೂ ನೆರುಕೆಯ ಮೇಲೆ ಹಾರಾಡುತ್ತಿದ್ದ ಹದ್ದುಗಳ ಕಾಟಕ್ಕೆ ಹೀಗೆ ಮಾಡಿದಳೊ? ಊರ ಮುಖ್ಯಸ್ಥರೆಲ್ಲ ಬಾಯಿಗೆ ಬಂದಂತೆ ಆಡಿದರೂ ತುಟಿಪಿಟಕ್ಕೆನ್ನದೆ ಕಟ್ಟೆಯ ಕೆಳಗೆ ಕೂತಿದ್ದಳಲ್ಲ! ಇಂಥದೆಲ್ಲ ಏನೇನೋ ಆಲೋಚನೆಗಳು ತಲೆಯೊಳಗೆದ್ದು ಮುಲುಗುಟ್ಟುತ್ತಿದ್ದವು. ಪ್ರಯಾಣದ ಆಯಾಸವಾಗಿದ್ದರೂ, ದೊಡ್ಡಮ್ಮ ರವಷ್ಟು ಜಾಸ್ತಿಯಾಗಿಯೇ ಊಟ ಇಕ್ಕಿದ್ದರೂ ನಿದ್ದೆ ಮಾತ್ರ ಹತ್ತಿರಲಿಲ್ಲ. ಎದ್ದವನೇ ಮಾದೇವಿಯ ಗುಡಿಸಲ ಕಡೆಗೆ ನಡೆದೆ. ಸಣ್ಣಗೆ ಗಾಳಿ ಬೀಸಿ ಗಿಡಮರಗಳು ಅಲ್ಲಾಡುವುದು, ಅಲೆಲ್ಲೋ ನಾಯಿಗಳ್ಬಾಕುವ ಸದ್ದು ಬಿಟ್ಟರೆ ಊರಿಗೂರೇ ರಣ ಮೌನದಲ್ಲಿತ್ತು.

ಮಾದೇವಿ ಗುಡಸಲು ಬಾಗಿಲ ಸಂದಿಯ ಕಿಂಡಿಯಿಂದ ಬುಡ್ಡಿಯ ಬೆಳಕು ಹೊರಗೆ ಇಣುಕುತ್ತಿತ್ತು. ಕಣ್ಣಿಟ್ಟು ನೋಡಿದರೆ ಮಧ್ಯದ ಕಂಭಕ್ಕೆ ದೊಡ್ಡ ತಮ್ಮಯ್ಯ ಒರಗಿ ಕೂತಿದ್ದರು. ಅರ್ಧ ಪ್ರಜ್ಞಾವಸ್ಥೆಯಲ್ಲಿ ಇದ್ದಾತ ಏನೇನೋ ಗೊಣಗುತ್ತಿದ್ದುದು ಕೇಳಿಸುತ್ತಿತ್ತು. ಬಾಗಿಲು ತಟ್ಟಿದೆ. ತಮ್ಮಯ್ಯ ಬೆಚ್ಚಿದರೂ 'ಯಾವನಲೇ ಇಸ್ಟೊತ್ತಿಲ್ಲಿ ಬಾಕ್ಲ ತಟ್ಟವ್ನ' ಅಂದು ಎದ್ದು ಬಂದು ಬಾಗಿಲು ತೆರೆದು ದುರುಗುಟ್ಟಿದರು. ಕತ್ತಲಲ್ಲಿ ನನ್ನ ಗುರುತು ಹತ್ತಲಿಲ್ಲ. 'ಓಹೋ ನೀ ಬ್ಯಾರೆ